ತಿರುಗುತ್ತಿರುವ 'ಹಲ್ಲಣ'ದಿಂದ ಬಿಡುಗಡೆ. ಅಕಾರಣ ಅಹಂಕಾರದಿಂದ ಪಡೆಯುವ ಬಿಡುಗಡೆಯು ಗಂಡನ್ನೂ ಅಪ್ಪಟ ಮಾನವನನ್ನಾಗಿಸುತ್ತದೆ. ಈ ಮಾನವೀಯತೆಯ ಕಡೆಗಿನ ಪ್ರಯಾಣವನ್ನು ಕುರಿತ ನಿರೂಪಣೆ ಈ ಪಠ್ಯ.

ಇದು 'ಅರಿವು ಸೋಂಕಿದ ಬಳಿಕ'ದ ಕಥನವಾಗಿ ಕಾಣುತ್ತದೆ ಬೆಲ್ ಹುಕ್ಸ್‌ನ ದೃಷ್ಟಿಯಿಂದ. ಆದರೆ, ಆ ಅರಿವಿನ ಸೋಂಕಿನ ದಾರಿಯ ಕಷ್ಟ ಸುಖಗಳನ್ನು, ಸವಾಲುಗಳನ್ನು ಪ್ರಸಕ್ತ ಕೃತಿ ಹೇಳುತ್ತದೆ. ಈ ತನಕ ಸ್ತ್ರೀವಾದ ನಡೆದುಬಂದ ದಾರಿಯನ್ನು ಹೇಳುತ್ತಲೇ ಅದು ನಡೆಯಬೇಕಾದ ದಾರಿಯನ್ನೂ ಆಲೋಚಿಸುತ್ತಾ ಹೋಗುತ್ತದೆ. ಆದರೆ, ಅದನ್ನು ಕೇವಲ ತಾತ್ವಿಕ ನೆಲೆಯಲ್ಲಿ ಹೇಳದೇ ಉದ್ದಕ್ಕೂ ಅದರ ಪ್ರಾಯೋಗಿಕ ನೆಲೆಗಳನ್ನು, ಅದರಲ್ಲೂ ದೈನಂದಿನ ಬದುಕಿನಲ್ಲಿ ಅವುಗಳನ್ನು ಒಳಗೊಳ್ಳಬಹುದಾದ ಸಾಧ್ಯತೆಗಳನ್ನು ತನ್ನ ಮತ್ತು ತನ್ನ ಸುತ್ತಲಿನವರ ಬದುಕನ್ನೇ ಆಧರಿಸಿ, ಗಂಡು ಮತ್ತು ಹೆಣ್ಣು ಇಬ್ಬರ ನಡವಳಿಕೆಗಳನ್ನೂ ಸಮಾಜಶಾಸ್ತ್ರಜ್ಞೆಯ ಸೂಕ್ಷ್ಮತೆಯಲ್ಲೂ, ರಾಜಕೀಯ ಹೋರಾಟಗಾರ್ತಿಯ ನಿಖರತೆಯಲ್ಲೂ, ಹೆಣ್ಣಿನ ಸಾವಧಾನದಲ್ಲೂ ಈ ಕೃತಿ ಶೋಧಿಸುತ್ತಾ ಹೋಗುತ್ತದೆ.

ಶ್ರೀಮತಿಯವರು ಕನ್ನಡ ಸ್ತ್ರೀವಾದವನ್ನು ಅನುವಾದಗಳ ಮೂಲಕ ಬಲಪಡಿಸಿದವರು. 'ಸೋದರಿತ್ವ ಪ್ರಬಲ'ವಾಗಿದೆ ಎನ್ನುವುದನ್ನು, ಜಾಗತಿಕ ಮಹತ್ವದ ಸ್ತ್ರೀವಾದಿ ಕೃತಿಗಳ ಮೂಲಕ ಅತ್ಯಂತ ಸಮರ್ಥವಾಗಿ ಕನ್ನಡಕ್ಕೆ ತಂದವರು. ನಿಡುಗಾಲದಿಂದ ಸ್ತ್ರೀವಾದಿ ಚಿಂತನೆಯನ್ನು ಕನ್ನಡದಲ್ಲಿ ಕಟ್ಟಿದವರು. ಸಮಕಾಲೀನ ಸಂದರ್ಭದಲ್ಲಿ ಸ್ತ್ರೀವಾದವು ವಹಿಸಬೇಕಾದ ಮುಂದಾಳತ್ವದ ಮುನ್ನುಡಿಯಂತಿರುವ ಈ ಕೃತಿಯನ್ನು ಕನ್ನಡದ್ದೇ ಎನ್ನುವಂತೆ ಅನುವಾದಿಸುವ ಮೂಲಕ ಶ್ರೀಮತಿಯವರು ಸ್ತ್ರೀವಾದ 'ಏಕ ಭಾಷೆ'ಯ ಸಮರ್ಥನೆಯನ್ನೂ ಮಾಡಿದ್ದಾರೆ.

ಸ್ತ್ರೀವಾದದಲ್ಲಿ ಆಸಕ್ತಿ ಇರುವವರಿಗೆ ಮಾತ್ರವಲ್ಲ, ಎಲ್ಲ ಶ್ರೀಸಾಮಾನ್ಯರೂ ಸ್ತ್ರೀವಾದದ ಹೆಜ್ಜೆಗುರುತುಗಳನ್ನು ಸರಳವಾಗಿ ಗ್ರಹಿಸಬಲ್ಲಂತೆ ಈ ನಿರೂಪಣೆ ಇದೆ. ಸ್ತ್ರೀವಾದವು ಆರಂಭದಲ್ಲಿ 'ಅವರು' ಬದಲಾಗಬೇಕೆಂದು ಯೋಚಿಸಿದ್ದನ್ನು, ಆಮೇಲೆ 'ನಾನು' ಬದಲಾಗಬೇಕೆಂದು ಯೋಚಿಸಿದ್ದನ್ನು, ಇದೀಗ ನಾನು ಮತ್ತು ಅವರು ಎಲ್ಲರೂ ಒಟ್ಟಾಗಿಯೇ ಬದಲಾಗಬೇಕು ಎನ್ನುವುದನ್ನು ಆಲೋಚಿಸುವುದರ ಮೂಲಕ ಕೊನೆಗೂ ಅತ್ಯುತ್ತಮ ಮಾರ್ಗವೊಂದನ್ನು ಕಂಡುಕೊಂಡ ಸಮಾಧಾನದಲ್ಲಿರುವಂತೆ ಕಾಣುತ್ತದೆ. ತಾಯ್ತನ ಮತ್ತು ತಂದೆತನಗಳನ್ನು ಮರುವ್ಯಾಖ್ಯಾನಿಸುವ ಮೂಲಕ ಭವಿಷ್ಯದಲ್ಲಿ ಗಂಡು ಮತ್ತು ಹೆಣ್ಣು ಇಬ್ಬರೂ ಸ್ತ್ರೀವಾದಿಗಳಾದರೆ ಅದು ಹೇಗಿರಬಹುದು ಎನ್ನುವುದನ್ನು 'ಕಾಣಿಸುವ' ಪ್ರಯತ್ನವನ್ನೂ ಮಾಡುತ್ತದೆ. ತಾಯ್ತನ ಮತ್ತು ತಂದೆತನಗಳು ಜೈವಿಕವೆಷ್ಟೋ ಅಷ್ಟೇ ಭಾವಕೋಶದ್ದೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿವೇಷದ್ದೂ ಆಗಿರುವುದರ ಜೊತೆಗೇ ಅದು ಅದಲುಬದಲಾಗಬಹುದಾದ ಸಾಧ್ಯತೆಯನ್ನು ಹೇಳುವ ಮೂಲಕವೇ 'ಪಾತ್ರ ನಿರ್ದಿಷ್ಟತೆ'ಯನ್ನು ದಾಟುವುದೆಂದರೆ, ಹೊಸ ರಚನೆಯ ಕಡೆಗಿನ ಪ್ರಯಾಣವೇ ಆಗಿರುತ್ತದೆ ಎನ್ನುವುದನ್ನು ಸೂಚಿಸುತ್ತದೆ. ಅತ್ಯಂತ ಮಹತ್ವದ ಸಂಗತಿಯೆಂದರೆ, ಯಾವುದನ್ನು ಅಸಾಧ್ಯ ಎಂದು ಮತ್ತೆಮತ್ತೆ ಹೇಳಲಾಗುತ್ತಲೇ ಬರಲಾಗುತ್ತಿದೆಯೋ ಅದೂ ಕೂಡ ಒಂದು ಮಿಥ್ಯೆ, ಒಂದು ಕಣ್ಕಟ್ಟು ಎನ್ನುವುದನ್ನು ನಿರ್ವಿವಾದವಾಗಿ, ಸಹಜವಾಗಿ ಈ ಕೃತಿ ಸ್ಥಾಪಿಸುವಲ್ಲಿ ಯಶಸ್ವಿಯಾಗುತ್ತದೆ.

ಹೆಣ್ಣಿನ ಅತಿ ದೊಡ್ಡ ಸವಾಲೆಂದರೆ, ಹೆಣ್ಣಿನ ಲೈಂಗಿಕತೆಯದ್ದು ಎನ್ನುವ ಅಂಶವನ್ನು ನೂರೊಂದನೆಯ ಬಾರಿಗೆ ಎನ್ನುವಂತೆ ಬೆಲ್ ಹುಕ್ಸ್ ಕೂಡ ಚರ್ಚಿಸುತ್ತಾರೆ. ಇನ್ನೇನಲ್ಲದಿದ್ದರೂ ಹೆಣ್ಣಿಗೆ ತನ್ನ ದೇಹದ ಮೇಲೆ ಅಧಿಕಾರ ಸ್ಥಾಪಿಸಿಕೊಳ್ಳುವುದು ಸಾಧ್ಯವಾಗುವುದಾದರೆ ಅದೇ ಪರಮಾದ್ಭುತ ಎನ್ನುವುದು ಆಸೆಯಾಗಿ, ಸಾಧಿತವಾಗಬೇಕಾದ ಹಕ್ಕಾಗಿ ಇಲ್ಲಿ ಮಾರ್ನುಡಿಗೊಳ್ಳುತ್ತದೆ. ಆದ್ದರಿಂದಲೇ